

ಭಕ್ತರ ಆರಾಧ್ಯದೈವ ಗಣಪನ ಭಿತ್ತಿಯಾಗಿಸಿಕೊಂಡು ಹಲವು ವೈವಿಧ್ಯಮಯ ಸಮರ್ಪಣಾ ಒಡವೆಗಳು ಬಂದಿವೆ. ವಿಶ್ವಂಭರನಿಗೆ ಪ್ರಿಯವಾದ ಗರಿಕೆಹುಲ್ಲು, ಮೋದಕ, ಲಡ್ಡು ಎಲ್ಲವೂ ಬೆಳ್ಳಿಯಲ್ಲಿ ಲಭ್ಯ.

# ಬೆಳ್ಳಿಯಲ್ಲಿ ಮೋದಕ ಗರಿಕೆ ಹುಲ್ಲಿನ ಸರ!

■ **ಕೃಷ್ಣವೇಣಿ ಪ್ರಸಾದ್ ಮುಳಿಯ**
ಚಿತ್ರಕೃಪೆ: ಮುಳಿಯ ಕೇಶವ ಭಟ್ & ಸನ್ಸ್

ಒಡವೆಯಲ್ಲಿ ದೇವಾನುದೇವತೆಗಳ ಚಿತ್ರವಿರುವ ಆಭರಣ ಧರಿಸುವುದು ಇಂದು ನಿನ್ನೆಯ ಕಥೆಯಲ್ಲ. ಲಕ್ಷ್ಮಿ ಪೆಂಡೆಂಟ್, ಗಣಪತಿ ಚಿತ್ರವಿರುವ ಉಂಗುರ, ಸರ, ಶಿವ–ಪಾರ್ವತಿಯರ ಕೆತ್ತನೆಯಿರುವ ಕಿವಿಯೋಲೆ, ಬ್ರೇಸ್‌ಲೆಟ್, ಪೆಂಡೆಂಟ್ ಇತ್ಯಾದಿಗಳನ್ನು ಧರಿಸಿ ದೇವರ ಮೇಲೆ ಪ್ರೀತಿ ತೋರಿಸುವುದು ಜನರ ಮನಸ್ಸಿಗೆ ಸಂಬಂಧಿಸಿದ್ದು. ಹೆಚ್ಚಾಗಿ ಲಕ್ಷ್ಮಿ ಕಿವಿಯೋಲೆ, ಪೆಂಡೆಂಟ್ ತೊಟ್ಟುಕೊಳ್ಳುವ ಪರಿಪಾಟ ಹೆಂಗಳೆಯರದ್ದು. ಇದರಿಂದ ಮನಸ್ಸಿಗೆ ಏನೋ ತೃಪ್ತಿ, ಸಮಾಧಾನ ಉಂಟಾಗುತ್ತದೆ ಎಂಬ ಭಾವನೆ. ಹೀಗಾಗಿ ಫ್ಯಾಷನ್ ಲೋಕದಲ್ಲಿ ಆ್ಯಂಟಿಕ್‌ನಿಂದ ಹಿಡಿದು ಎಲ್ಲ ರೀತಿಯ ಒಡವೆಗಳಲ್ಲೂ ದೇವಾನುದೇವತೆಗಳ ಚಿತ್ರವಿರುವ ಒಡವೆಗಳನ್ನು ಕಾಣಬಹುದು.

ಟೆಂಪಲ್ ಜ್ಯುವೆಲ್ಲರಿಯಲ್ಲಂತೂ ದೇವರ ಪರಿಕಲ್ಪನೆ ಯಥಾವತ್ತಾಗಿ ಒಡಮೂಡಿದೆ. ಗಣೇಶ ಸಾಮಾನ್ಯವಾಗಿ ಎಲ್ಲರ ಆರಾಧ್ಯ ದೈವ. ದೇವರಲ್ಲೇ ಅಗ್ರಮಣೆ ಹಾಕಿರುವ ಗಣಪನಿಗೆ ಒಡವೆಯಲ್ಲೂ ಹೆಚ್ಚಿನ ಪ್ರಾಧಾನ್ಯ ಇದ್ದೇ ಇದೆ.ಗಣೇಶ, ಗಣಪತಿ, ವಿಘ್ನೇಶ, ಲಂಬೋದರ, ಏಕದಂತ.. ಹೀಗೆ ನೂರಾರು ಹೆಸರುಗಳಿಂದ ಕರೆಸಿಕೊಳ್ಳುವ ಈ ಮೋದಕಪ್ರಿಯ ಗಣಪ, ಭಕ್ತರ ಮೊದಲ ಪೂಜೆ ಸಲ್ಲುವ ಭಗವಂತ ಎಂದೇ ಖ್ಯಾತಿ. ಅಂತೂ ಗಣೇಶನನ್ನು ಹಲವು ರೂಪದಲ್ಲಿ ಹಲವು ರೀತಿಯಲ್ಲಿ ಬಗೆ ಬಗೆಯಾಗಿ ಭಜಿಸುತ್ತಾರೆ. ಇವನು ಅತ್ಯಂತ ತಿಂಡಿಪ್ರಿಯ. ಗರಿಕೆ ಹುಲ್ಲು, ಹೂವಿನ ಮಾಲೆ ಇವನಿಗೆ ಇಷ್ಟ. ಲಡ್ಡು, ಮೋದಕ ಎಂದರೆ ಪಂಚಪ್ರಾಣ.

ಗಣೇಶನಿಗೆ ಪ್ರಿಯವಾದ ಗರಿಕೆ ಹುಲ್ಲು, ಗರಿಕೆ ಮಾಲೆ, ಮೋದಕ, ಲಡ್ಡು.. ಇವೆಲ್ಲವೂ ಇದೀಗ ಬೆಳ್ಳಿಯಲ್ಲಿ ಬಂದಿದೆ. ಗಣೇಶನಿಗೆ ಇವುಗಳನ್ನು ಕಾಣಿಕೆ ಸಲ್ಲಿಸಬಹುದು. ಹಬ್ಬವೇ ಇರಬೇಕೆಂದೇನಿಲ್ಲ. ಸದಾಕಾಲ ಭಜಿಸುವ ಸ್ಮರಿಸುವ ಪೂಜಿಸುವ ಸೊಂಡಿಲ ಮುಖದ ಗಣಪನಿಗೆ ಬೆಳ್ಳಿಯ ವಸ್ತುಗಳನ್ನು ಭಕ್ತಿಪೂರ್ವಕವಾಗಿ ಅರ್ಪಿಸಬಹುದು. ■



**ಗರಿಕೆ ಮಾಲೆ:** ನೋಡಲು ಆ್ಯಂಟಿಕ್ ಹಾರದಂತೆ, ವೃತ್ತಾಕಾರದಲ್ಲಿ ಇದ್ದು, ಗಣೇಶನ ದೊಡ್ಡ ದೇಹಕ್ಕೆ ಸೂಕ್ತವಾಗಿದೆ.

**ಅಪ್ಪ:** ಗಣೇಶನಿಗೆ ಪ್ರಿಯ ತಿಂಡಿ ಅಪ್ಪ ಕಜ್ಜಾಯ. ಬೆಳ್ಳಿಯಲ್ಲಿ ಇದು ನುಣುಪಾಗಿದ್ದು, 10ರಿಂದ 12 ಗ್ರಾಂನಲ್ಲಿ ಸಾಧ್ಯವಾಗುತ್ತದೆ.





**ಲಡ್ಡು:** ಒಂದು ತಟ್ಟೆಯಲ್ಲಿ ನಾಲ್ಕು ಲಡ್ಡುಗಳ ಗೋಪುರವಿದ್ದಂತೆ ಇದ್ದು ಗಣಪತಿಗೆ ಹರಕೆಯ ಕಾಣಿಕೆಯಾಗಿ ಸಮರ್ಪಿಸಬಹುದು.

**ಹೂವಿನ ಮಾಲೆ**

ನೋಡಲು ನೈಜ ಹೂವಿನಂತೆಯೇ ಇದ್ದು, ಬೆಳ್ಳಿ ಹೂಗಳನ್ನು ಪೋಣಿಸಿ ಚಿನ್ನದ ಲೇಪನವನ್ನು ಹೊಂದಿರುವ ಮಾಲೆ ಇದು. ಒಟ್ಟಿನಲ್ಲಿ ಗಣೇಶನಿಗೆ ಪ್ರಿಯವಾದ ವಸ್ತುಗಳನ್ನು ಯಾವುದೇ ರೂಪದಲ್ಲಿ ಭಕ್ತರ ಆಸೆಯಂತೆ ಸಮರ್ಪಿಸಬಹುದು.



**ಮೋದಕ**

ಹೇಳಿಕೇಳಿ ಗಣಪ ಮೋದಕಪ್ರಿಯ. ಹೀಗಾಗಿ ಬೆಳ್ಳಿಯಲ್ಲೇ ಗಣಪತಿಗೆ ಮೋದಕವನ್ನು ತಯಾರಿಸಲಾಗಿದೆ. ಬೆಳ್ಳಿಯ ಮೋದಕದ ಮೇಲೆ ಹೊಳಪು ಬರಲು ಕಟ್ಟಿಂಗ್ಸ್ ಇದೆ. ರೂಪ ಮೋದಕದ್ದೇ. ಟೊಳ್ಳಾಗಿದೆ. 20ರಿಂದ 24 ಗ್ರಾಂ ತೂಕವಿದೆ.